ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 7 ಚಾ ಸಾ 8

ಹೆಸರುಃ ಸುನೀಲ್

ತಂದೆಯ ಹೆಸರುಃ ನಾರಾಯಣ್

ವಯಸ್ಸುಃ 42 ವರ್ಷ

ಉದ್ಯೋಗಃ ಪ್ಲಾಸ್ಟಿಕ್ ಹೂವಿನ ವ್ಯಾಪಾರ

ವಾಸಃ ತಮಿಳುನಾಡು.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಮ್ಮ ತಂದೆ ತಾಯಿಗೆ ನಾವು ಎಂಟು ಜನ ಮಕ್ಕಳ ಪೈಕಿ ನಾನು ಮೊದಲನೆಯವ. ನಾನು ಮೊದಲು ಬೇರೆ ಮದುವೆಯಾಗಿದ್ದೆ, ಅದನ್ನು ಬಿಟ್ಟು ನಾನು ಈ ಪ್ರಕರಣದ ಆರೋಪಿ ಲಕ್ಷ್ಮಿಯನ್ನು 10 ವರ್ಷದ ಹಿಂದೆ ಮದುವೆಯಾಗಿರುತ್ತೇನೆ. ಸದರಿ ಲಕ್ಷ್ಮಿ ಆಂದ್ರಪ್ರದೇಶದ ಹೈದರಾಬಾದ್ ನವರು.

2. ನನಗೆ ಮತ್ತು ಲಕ್ಷ್ಮಿಗೆ ಸಂಜು ಮತ್ತು ಖುಷಿ ಎಂಬ ಇಬ್ಬರು ಮಕ್ಕಳು.

3. ಮದುವೆಯಾದ ನಂತರ ನಾನು ಮತ್ತು ಲಕ್ಷ್ಮಿ ಸುಮಾರು ಐದು ವರ್ಷಗಳ ಕಾಲ ಹೈದರಾಬಾದ್ ನಲ್ಲಿ ಸಂಸಾರ ನಡೆಸಿರುತ್ತೇವೆ. ಆನಂತರ ನಾವು ಮೈಸೂರಿನ ಹೊಸಹುಂಡಿಯಲ್ಲಿ ಒಂದು ವರ್ಷಗಳ ಕಾಲ ಸಂಸಾರ ನಡೆಸಿರುತ್ತೇವೆ. ಆನಂತರದಲ್ಲಿ ನಾವು ನಮ್ಮ ಸಂಸಾರದ ಜೊತೆಗೆ ಬೆಲವತ್ತಮಂಟಿಗೆ ಹೋಗಿ ಅಲ್ಲಿ ಜೀವನ ಪ್ರಾರಂಭಸಿದ್ದೇವೆ ಕಾರಣ ಅಲ್ಲಿ ನನ್ನ ತಂಗಿ ಗೌರಿಯ ಮನೆ ಇತ್ತು. ಅಕ್ಕಪಕ್ಕದಲ್ಲಿದ್ದರೆ ಮಕ್ಕಳಿಗೆ ಓದಲು ಚೆನ್ನಾಗಿರುತ್ತದೆ ಎಂಬ ಕಾರಣಕ್ಕೆ ಬಲವತ್ತಮಂಟಿಗೆ ಹೋಗಿರುತ್ತೇವೆ.

4. ನಾನು ಪ್ಲಾಸ್ಟಿಕ್ ಹೂವಿನ ವ್ಯಾಪಾರವನ್ನು ತಮಿಳುನಾಡಿನ ಮದುರೈ ನಲ್ಲಿ ಮಾಡಿಕೊಂಡಿದ್ದೆ.

5. ಪ್ರಸ್ತುತ ಪ್ರಕರಣದ ಘಟನೆ ನಡೆಯುವುದಕ್ಕಿಂತ ಐದು ತಿಂಗಳ ಹಿಂದೆ ನಮ್ಮ ಸಂಸಾರದ ಸಮೇತ ನಾವು ಬೆಲವತ್ತಮಂಟಿಗೆ ಬಂದಿದ್ದೆವು.

6. ಆ ರೀತಿ ಬೆಲವತ್ತಮಂಟಿಗೆ ಬಂದ ನಂತರದಲ್ಲಿ ನಾನು ನನ್ನ ಕೆಲಸದ ನಿಮಿತ್ತ ಮದುರೈಗೆ ಹೋಗಿದ್ದೇನೆ.

7. ನಾನು ಆ ರೀತಿ ತಮಿಳುನಾಡಿಗೆ ಹೋಗಿದ್ದರಿಂದ ನನ್ನ ಹೆಂಡತಿಯ ಜೊತೆಯಲ್ಲಿ ಮಾತನಾಡುವ ಸಲುವಾಗಿ ಒಂದು ಮೊಬೈಲ್ ಫೋನ್ ತೆಗೆದುಕೊಟ್ಟಿರುತ್ತೇನೆ ಆದರೆ ಅದರ ನಂಬರ್ ನೆನಪಿಲ್ಲ, ಕಾರಣ ನನಗೆ ವಿದ್ಯಾಭ್ಯಾಸ ಇಲ್ಲ.

8. ನಾನು ಮದುರೈಗೆ ಹೋಗಿದ್ದಾಗ ಬೆಲವತ್ತಮಂಟಿಯ ನನ್ನ ಮನೆಯಲ್ಲಿ ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಇದ್ದರು.

9. 6ನೇ ತಾರೀಕಿನಂದು ನಾನು ಮದುರೈನಲ್ಲಿದ್ದಾಗ ಬೆಳಿಗ್ಗೆ 8-30 ಗಂಟೆಗೆ WhatsApp ನಲ್ಲಿ ಒಬ್ಬ ಹೆಂಗಸು ಮತ್ತು ನಾಲ್ಕು ಜನ ಮಕ್ಕಳನ್ನು ಕೆ.ಆರ್.ಸಾಗರದಲ್ಲಿ ಕೊಲೆ ಮಾಡಿದ ಸಂಬಂಧವಾಗಿ ಫೋಟೋಗಳು ಬಂದವು. ಅದೇ ರೀತಿ ಅಂಥಹ ಫೋಟೋಗಳು ಟಿ ವಿ ಯಲ್ಲೂ ಕೂಡ ಬಂತು.

10. ಆ ರೀತಿ ಫೋಟೋಗಳು ಬಂದಾಗ ಅದರಲ್ಲಿ ಕೊಲೆಯಾದ ಹೆಂಗಸಿನ ಫೋಟೋ ಕೂಡ ಇತ್ತು. ಸದರಿ ಫೋಟೋದಲ್ಲಿದ್ದ ಕೊಲೆಯಾದ ಹೆಂಗಸು ನನ್ನ ಹೆಂಡತಿ ಆರೋಪಿ ಲಕ್ಷ್ಮಿಯ ಚಿಕ್ಕಮ್ಮನ ಮಗಳು.

11. ಆ ರೀತಿ ಮೃತಪಟ್ಟ ಲಕ್ಷ್ಮಿಯ ಮದುವೆ ಗಂಗಾರಾಮ್ ನ ಜೊತೆ ಆಗಿತ್ತು. ಸದರಿ ಗಂಗಾರಾಮ್ ನನ್ನ ಚಿಕ್ಕಮ್ಮನ ಮಗನಾದ್ದರಿಂದ

ಆತ ಚಿಕ್ಕಂದಿನಿಂದಲೂ ನನಗೆ ಗೊತ್ತಿದ್ದ.

12. ನಾನು ಮತ್ತು ಗಂಗಾರಾಮ್ ಕೆ.ಆರ್. ಎಸ್. ನಲ್ಲಿ ಹುಟ್ಟಿ ಬೆಳೆದಿದ್ದೇವೆ.

13. ಆ ರೀತಿ ಮೃತಪಟ್ಟ ಲಕ್ಷ್ಮಿ ನನ್ನ ಹೆಂಡತಿ ಲಕ್ಷ್ಮಿಯ ಚಿಕ್ಕಮ್ಮನ ಮಗಳಾದ್ದರಿಂದ ಆ ವಿಚಾರವನ್ನು ನಾನು ನನ್ನ ತಾಯಿಗೆ ತಿಳಿಸಿದೆ.

14. ಗಂಗಾರಾಮ್ ನ ಜೊತೆಯಲ್ಲಿ ನನ್ನ ಹೆಂಡತಿ ಲಕ್ಷ್ಮಿಗೆ ಅಕ್ರಮ ಸಂಬಂಧ ಇದೆ ಎಂಬ ವಿಚಾರ ಘಟನೆ ನಡೆದ 5-6 ದಿವಸದ ನಂತರ ನನಗೆ ಗೊತ್ತಾಗಿದೆ.

15. ಗಂಗಾರಾಮ್ ನ ಜೊತಯಲ್ಲಿ ಅಕ್ರಮ ಸಂಬಂಧ ಇದ್ದ ಕಾರಣಕ್ಕಾಗಿ ನನ್ನ ಹೆಂಡತಿ ಲಕ್ಷ್ಮಿ ಆಕೆಯ ಚಿಕ್ಕಮ್ಮನ ಮಗಳು ಲಕ್ಷ್ಮಿಯನ್ನು ಮತುತ ನಾಲ್ಕು ಜನ ಮಕ್ಕಳನ್ನು ಕೊಲೆ ಮಾಡಿದ್ದಾಳೆ ಎಂಬ ವಿಚಾರವು ನನಗೆ ಗೊತ್ತಾಯಿತು.

16. ಆನಂತರದಲ್ಲಿ ನನ್ನ ಹೆಂಡತಿ ಲಕ್ಷ್ಮಿಯನ್ನು ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ. ಈಗ ನಾನು Google Meet ಮುಖಾಂತರ ನೋಡುತ್ತಿರುವ ಹೆಂಗಸು ನನ್ನ ಹೆಂಡತಿ ಲಕ್ಷ್ಮಿಯಾಗಿರುತ್ತಾಳೆ. (ಈ ಹಂತದಲ್ಲಿ ಆರೋಪಿ ಲಕ್ಷ್ಮಿಯನ್ನು Google

Meet ಮುಖಾಂತರ ಸಾಕ್ಷಿಗೆ ತೋರಿಸಲಾಯಿತು.)

17. ಆ ರೀತಿ ನನ್ನ ಹೆಂಡತಿ ಲಕ್ಷ್ಮಿಯನ್ನು ಪೊಲೀಸರು ಬಂಧಿಸಿದ ನಂತರ ಮಕ್ಕಳಿಬ್ಬರೂ ನನ್ನ ತಂಗಿ ಗೌರಿಯ ಮನೆಯಲ್ಲಿದ್ದರು.

18. ನನ್ನನ್ನು ಮತ್ತು ನನ್ನ ಮಕ್ಕಳನ್ನು ಗಂಗಾರಾಮ್ ಮನೆಯವರು ಸಾಯಿಸುತ್ತಾರೆ ಎಂದು ಭಯಪಟ್ಟು ಬೆಲವತ್ತಮಂಟಿಗೆ ಹೋಗಲಿಲ್ಲ. ನನ್ನ ತಮ್ಮ ಮೋಹನನ್ನು ಬೆಲವತ್ತಮಂಟಿಗೆ ಕಳುಹಿಸಿ ಮಕ್ಕಳಿಬ್ಬರನ್ನು ಮದುರೈಗೆ ಕರೆಯಿಸಿಕೊಂಡಿರುತ್ತೇನೆ.

19. ಆನಂತರ ನಾನು ಭಯಪಟ್ಟು ನನ್ನ ಮಕ್ಕಳ ಜೊತೆಯಲ್ಲಿ ಉತ್ತರ ಪ್ರದೇಶದ ಲಲತ್‌ಪೂರ್ ಗೆ ಹೋಗಿ ಅಲ್ಲಿ ವಾಸವಿದ್ದೇನೆ. ಮೃತಪಟ್ಟ ಲಕ್ಷ್ಮಿಯ ತಾಯಿಯ ಮನೆ ಹೈದರಾಬಾದ್ ನಲ್ಲಿ ಆರೋಪಿ ಲಕ್ಷ್ಮಿಯ ತಾಯಿಯ ಮನೆ ಇರುವ ಪ್ರದೇಶದಲ್ಲಿದೆ.

20. ನಾನು ನನ್ನ ಹೆಂಡತಿಗೆ ಫೋನ್ ಮಾಡಿದಾಗ ಆಕೆಯ ಫೋನ್ busy ಎಂದು ಬರುತ್ತಿತ್ತು ಯಾಕೆ busy, ನನ್ನ ಫೋನನ್ನು ಯಾಕೆ ರಿಸೀವ್ ಮಾಡುತ್ತಿಲ್ಲ ಎಂದು ನಾನು ಆಕೆಯನ್ನು ಕೇಳಿದಾಗ ನೀನು ಸಂಶಯಪಟ್ಟರೆ ನಾನು ಸತ್ತು ಹೋಗುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಳು. ಆಗ ನಾನು ಸುಮ್ಮನೆ ಜಗಳ ಯಾಕೆ ಎಂದು ಫೋನ್ ಮಾಡದೆ ಬೆಳಗ್ಗಿನ ಸಮಯದಲ್ಲಿ ಆಕೆಗೆ ಫೋನ್ ಮಾಡುತ್ತಿದ್ದೆ.

21. ಒಂದು ಸಲ ಹೈದರಾಬಾದ್ ನಲ್ಲಿದ್ದಾಗ ಗಂಗಾರಾಮ್ ನ ಜೊತೆಯಲ್ಲಿ ನೀನು ನಡೆದುಕೊಳ್ಳುತ್ತಿರುವ ರೀತಿ ಸರಿ ಇಲ್ಲ ಎಂದು ನನ್ನ ಹೆಂಡತಿಗೆ ಮತ್ತು ಆಕೆಯ ಮನೆಯವರಿಗೆ ಹೇಳಿದಾಗ ಪಂಚಾಯ್ತಿ ನಡೆಯಿತು. ಆ ಪಂಚಾಯ್ತಿಯಲ್ಲಿ ಅವರೆಲ್ಲರೂ ಆ ರೀತಿಯಲ್ಲಾ ಮಾತನಾಡಬೇಡ ಎಂದು ನನಗೆ ಹೇಳಿದರು.

22. ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳ ಕೊಲೆಯಾಗುವ ಪೂರ್ವದಲ್ಲಿ ಆರೋಪಿ ಮತ್ತು ಗಂಗಾರಾಮ್ ನ ನಡುವೆ ಅಕ್ರಮ ಸಂಬಂಧ ಇದ್ದ ವಿಚಾರ ಗೊತ್ತಿರಲಿಲ್ಲ ಆದರೆ ಸಲುಗೆಯಿಂದ ಇದ್ದ ವಿಚಾರ ಗೊತ್ತಿತ್ತು.

23. ಗಂಗಾರಾಮ್ ನ ಮೇಲೆ ಜಾಸ್ತಿ ಪ್ರೀತಿ ಇದ್ದುದರಿಂದ ನನ್ನ ಹೆಂಡತಿ ಲಕ್ಷ್ಮಿ ಮೃತ ಲಕ್ಷ್ಮಿಯನ್ನು ಕೊಲೆ ಮಾಡಿದ್ದಾಳೆ. ಲಕ್ಷ್ಮಿಯನ್ನು ಕೊಲೆ ಮಾಡಿದ್ದು ಬೇರೆಯವರಿಗೆ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ನಾಲ್ಕು ಜನ ಮಕ್ಕಳನ್ನೂ ಕೂಡ ಕೊಲೆ ಮಾಡಿರುತ್ತಾಳೆ.

24. ಆ ರೀತಿ ಐದು ಜನರನ್ನು ಕೊಲೆ ಮಾಡಿದ ಮೂರು ತಿಂಗಳ ನಂತರ ಪೊಲೀಸರು ನನ್ನನ್ನು ಕರೆದಿದ್ದಾರೆ, ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ.

**<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಮದ್ಯಾಹ್ನಕ್ಕೆ 2-45 ಗಂಟೆಗೆ ಮುಂದೂಡಲಾಯಿತು.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

ದಿಃ 24.11.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಸ್.ಆರ್ ಎಸ್ ವಕೀಲರಿಂದ**

25. ನಾನು ಈಗ ಉಪಯೋಗಿಸುತ್ತಿರುವ ಮೊಬೈಲ್ ಸಂಖ್ಯೆ 8660355434. ನನ್ನ ಹೆಂಡತಿ 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾಳೆ. ನನ್ನ ಮದುವೆಗಿಂತ ಪೂರ್ವದಲ್ಲಿಯೇ ಗಂಗಾರಾಮ್ ನ ಮದುವೆಯಾಗಿದೆ.

26. ಈ ಘಟನೆ ನಡೆಯುವುದಕ್ಕಿಂತ ಮೂರು ನಾಲ್ಕು ತಿಂಗಳ ಹಿಂದೆ ನನ್ನ ಹೆಂಡತಿಗೆ ಮೊಬೈಲ್ ಮತ್ತು ಸಿಮ್ ತೆಗೆದುಕೊಟ್ಟಿರುತ್ತೇನೆ.

27. ನಾನು ಕೆ.ಆರ್. ಎಸ್. ನಲ್ಲಿ ಹುಟ್ಟಿಬೆಳೆದಿರುತ್ತೇನೆ ಮತ್ತು ಅಲ್ಲಿ ನನಗೆ ಸಂಬಂಧಿಕರು ಇದ್ದಾರೆ ಎನ್ನುವುದು ಸರಿ. ಅಲ್ಲಿ ನನ್ನ ತಂಗಿ ದಾನಿಬಾಯಿ ಕೂಡ ವಾಸವಿದ್ದಾಳೆ.

30. ನಾನು ಕೆ.ಆರ್.ಎಸ್ ನಲ್ಲಿದ್ದಾಗ ನಾನು ಸಂಬಂಧಿಕರ ಮನೆಗೆ ಹೋಗುತ್ತಿದ್ದೆ ಮತ್ತು ಅವರು ನಮ್ಮ ಮನೆಗೆ ಬರುತ್ತಿದ್ದರು ಎಂದರೆ ನಾನು ಕೆ.ಆರ್. ಎಸ್ ಬಿಟ್ಟು ಹೋಗಿ ಎಂಟು ವರ್ಷಗಳಾಗಿವೆ.

31. ಕೆ.ಆರ್.ಎಸ್ ನಲ್ಲಿ ನಮ್ಮ ಸಂಬಂಧಿಕರು ಇದ್ದುದರಿಂದ ನನ್ನ ಹೆಂಡತಿ ಕೆ.ಆರ್.ಎಸ್ ನಲ್ಲಿ ಸಂಬಂಧಿಕರ ಮನೆಗೆ ಮತ್ತು ಮೃತ ಲಕ್ಷಿಯ ಮನೆಗೂ ಹೋಗುತ್ತಿದ್ದಳು.

32. ಪ್ರಶ್ನೆಃ ರಾತ್ರಿ 8 ಗಂಟೆಗೆ ಪೋನ್ ಮಾಡಿದಾಗ ಪೋನ್ ಮಾಡಬೇಡ ಎಂದು ನಿಮ್ಮ ಹೆಂಡತಿ ನಿಮಗೆ ಯಾವಾಗ ತಿಳಿಸಿದ್ದಾಳೆ?
ಉತ್ತರ ನಾನು ರಾತ್ರಿ ಹೊತ್ತಿನಲ್ಲಿ ಪೋನ್ ಮಾಡಿದಾಗಲೆಲ್ಲಾ ನನ್ನ ಹೆಂಡತಿ ಪೋನ್ ಮಾಡಬೇಡ ಎಂದು ನನಗೆ ತಿಳಿಸಿದ್ದಾಳೆ.

33. ಆ ರೀತಿ ಹೇಳಿದ ನಂತರ ನಾನು ನನ್ನ ಹೆಂಡತಿಗೆ ರಾತ್ರಿಯ ಹೊತ್ತಿನಲ್ಲಿ ಪೋನ್ ಮಾಡುತ್ತಿರಲಿಲ್ಲ, ಬೆಳಗಿನ ಹೊತ್ತಿನಲ್ಲಿ ಮಾಡುತ್ತಿದ್ದೆ. ನಾನು ನನ್ನ ಹೆಂಡತಿ ಮಕ್ಕಳ ಜೊತೆಯಲ್ಲಿ ಮಾತನಾಡಲು ದಿನಕ್ಕೆ ಒಂದು - ಎರಡು ಬಾರಿ ಪೋನ್ ಮಾಡುತ್ತಿದ್ದೆ.

34. ಘಟನೆ ನಡೆದ ವಿಚಾರ ನನಗೆ WhatsApp ನಲ್ಲಿ ಬಂದ ಪೊಟೋಗಳು ಮತ್ತು ಟಿ ವಿ ಯಲ್ಲಿ ಬಂದ ನ್ಯೂಸ್ ನೋಡಿ ನನಗೆ ಗೊತ್ತಾಗಿದೆ. ಆ ವಿಚಾರ ಗೊತ್ತಾದ ನಂತರದಲ್ಲಿ ನಾನು ನನ್ನ ಹೆಂಡತಿ ಲಕ್ಷಿಗೆ ಬೆಳಿಗ್ಗೆ 8-9 ಗಂಟೆಗೆ ಪೋನ್ ಮಾಡಿರುತ್ತೇನೆ. ಆಗ ಆಕೆ ನೀನು ಪೋನ್ ಮಾಡಬೇಡ ಇಡು, ನಾನು ಮಕ್ಕಳನ್ನು ತಂಗಿಯ ಮನೆಗೆ ಬಿಟ್ಟು ಶವ ನೋಡಲು ಹೋಗುತ್ತಿದ್ದೇನೆ ಎಂದು ತಿಳಿಸಿದಳು.

35. ನನ್ನ ಹೆಂಡತಿಯ ಜೊತೆಯಲ್ಲಿ ಸಲುಗೆಯಿಂದ ವರ್ತಿಸಬೇಡ ಎಂದು ನಾನು ಗಂಗಾರಾಮ್ ಗೆ ತಿಳಿಸಿಲ್ಲ.

36. ಹೈದರಾಬಾದ್ ಅನ್ನು ಬಿಟ್ಟು ಸುಮಾರು ಎರಡು ವರ್ಷ ಆಯಿತು.

37. ಹೈದರಾಬಾದ್ ನಲ್ಲಿ ನನ್ನ ಹೆಂಡತಿಗೆ ಬುದ್ಧಿವಾದ ಹೇಳುವ ಸಲುವಾಗಿ ಪಂಚಾಯ್ತಿ ಮಾಡಲಾಗಿದೆ ಎಂಬ ವಿಚಾರವನ್ನು ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ತಿಳಿಸಿಲ್ಲ. ನನ್ನ ಹೆಂಡತಿಯ ಮೊಬೈಲ್ ನಂಬರ್ ಏನು ಎಂದು ನಾನು ಪೊಲೀಸರಿಗೆ ತಿಳಿಸಿಲ್ಲ.

38. ನನ್ನ ಹೆಂಡತಿಯ ವಿರುದ್ದ ಆಪಾದನೆ ಇರುವ ಕಾರಣಕ್ಕಾಗಿ ನಮ್ಮ ಕುಟುಂಬಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬ ಕಾರಣಕ್ಕಾಗಿ ನಾನು ಆಕೆಯ ವಿರುದ್ದ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

39. ಗಂಗಾರಾಮ್ ನ ಮನೆಯ ಕಡೆಯವರು ನನಗೆ ತೊಂದರೆ ಕೊಡಬಹುದು ಎಂಬ ಕಾರಣಕ್ಕಾಗಿ ಗಂಗಾರಾಮ್ ಮತ್ತು ನನ್ನ ಹೆಂಡತಿಗೆ ಅಕ್ರಮ ಸಂಬಂಧ ಇತ್ತು ಎಂದು ನಾನು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

40. ಲಕ್ಷ್ಮಿಯ ಸಾವಿಗೆ ಮತ್ತು ನಾಲ್ಕು ಜನ ಮಕ್ಕಳ ಸಾವಿಗೆ ಆರೋಪಿ ಲಕ್ಷ್ಮಿಯೇ ಕಾರಣ ಮತ್ತು ಆಕೆಗೆ ಮತ್ತು ಗಂಗಾರಾಮ್ ಗೆ ಇದ್ದ ಅಕ್ರಮ ಸಂಬಂಧಕ್ಕಾಗಿಯೇ ಐದು ಜನರನ್ನು ಕೊಲೆ ಮಾಡಿದ್ದಾಳೆ ಎಂದು ನಾನು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

41. ಈ ದಿವಸ ಫ್ರಾ ಸಾ 1 ಲಕ್ಷ್ಮಿ ನನಗೆ ಫೋನ್ ಮಾಡಿದ್ದಾಳೆ ಮತ್ತು ನಾನು ಚರ್ಚಿಸಿ ಸಾಕ್ಷ್ಯವನ್ನು ನುಡಿಯಲು ಬಂದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ: ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)